# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 936 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.12.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದ ಅಂಕಿ ಅಂಶಗಳ ಪ್ರಕಾರ "ಆಧಾರ್ ಮಿಸ್ಮ್ಯಾಚ್" ಅಥವಾ ಇತರ ತಾಂತ್ರಿಕ ಕಾರಣಗಳಿಂದ ಸಾವಿರಾರು ಬಡ ಕುಟುಂಬಗಳ ರೇಷನ್ ಕಾರ್ಡ್ ಗಳನ್ನು ರದುಪಡಿಸಲಾಗಿದೆ; ಇದರಿಂದ ಅನೇಕರ ಅನ್ನಭಾಗ್ಯ ಯೋಜನೆಯ ಲಾಭದಿಂದ ವಂಚಿತರಾಗಿದ್ದಾರೆ. ಈ ಬಗ್ಗೆ ಸರ್ಕಾರದ ನಿಖರ ಸಂಖ್ಯೆಗಳೇನು; ಹಾಗೂ ಪಡಿತರ ಚೀಟಿಗಳನ್ನು ರದ್ದುಪಡಿಸುವ ಮುನ್ನ ಪೂರಕ ಪರಿಶೀಲನೆ ಏಕೆ ಮಾಡಲಾಗುತ್ತಿಲ್ಲ; (ವಿವರ ನೀಡುವುದು) | ಆಧಾರ್ ಮಿಸ್ಮ್ಯಾಚ್ ಅಥವಾ ಇತರ ತಾಂತ್ರಿಕ ಕಾರಣಗಳಿಂದ ಅರ್ಹ ಆದ್ಯತಾ ಪಡಿತರ ಚೀಟಿದಾರರ ಪಡಿತರ ಚೀಟಿಯನ್ನು ರದ್ದು ಪಡಿಸಿರುವುದಿಲ್ಲ.<br><br>ಆದರೆ, ಕೇಂದ್ರ ಸರ್ಕಾರದಿಂದ ಈ ಕೆಳಕಂಡ ವಿಧಗಳಲ್ಲಿ 7,76,206 ಶಂಕಾಸ್ಪದ ಪಡಿತರ ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ.<br>1. CBDT Income Group Annual Income > 1,20,000<br>2. GSTN Gross Turnover >25 Lacs<br>3. MCA Individual as Director<br>4. PDS Duplicate RC Inter State<br>5. PDS Duplicate RC Intra State<br>6. PDS RC Member Above 100 Years<br>7. PDS Silent RC >12 Months<br>8. PDS Silent RC 6-12 Months<br>9. PDS Single Member Below 18 Years<br>10. PM KISAN Land Holding >7.5 Acres<br>11. UIDAI Aadhaar Status Deceased<br>12. Vehicle Ownership value Owning LIGHT MOTOR VEHICLE |

13. Vehicle Ownership value Owning MEDIUM MOTOR VEHICLE

14. Vehicle Ownership value Owning OTHER THAN MENTIONED ABOVE

ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು 2017 ರಲ್ಲಿ ಈ ಕೆಳಕಂಡಂತೆ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ.

1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ ನಿಗಮಗಳು/ ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ಜಿಎಸ್‌ಟಿ/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.
2. ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.
3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.
4. ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.

ಸದರಿ ಮಾನದಂಡಗಳ ವಿರುದ್ಧವಾಗಿ ಪಡೆದಿರುವ ಆದ್ಯತಾ ಪಡಿತರ ಚೀಟಿಗಳನ್ನು ಪತ್ತೆಹಚ್ಚಿ ಸದರಿ ಪಡಿತರ ಚೀಟಿಗಳನ್ನು

| | | |
|---|---|---|
| | | ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗಿರುತ್ತದೆ.<br>ವಿವರ ಅನುಬಂಧ-01 ರಲ್ಲಿ ಒದಗಿಸಲಾಗಿದೆ |
| ಆ | ಕೊಪ್ಪಳ ಜಿಲ್ಲೆಯಲ್ಲಿ ಮೇಲಿನ ಕಾರಣಕ್ಕಾಗಿ ಕಳೆದ ಒಂದು ವರ್ಷದಲ್ಲಿ ರದ್ದುಪಡಿಸಿದ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಕೊಪ್ಪಳ ಜಿಲ್ಲೆಯಲ್ಲಿ "ಆಧಾರ್ ಮಿಸ್ಮ್ಯಾಚ್. ಅಥವಾ ಇತರ ತಾಂತ್ರಿಕ ಕಾರಣಗಳಿಂದ ಅರ್ಹ ಆದ್ಯತಾ ಪಡಿತರ ಚೀಟಿದಾರರ ಪಡಿತರ ಚೀಟಿಯನ್ನು ರದ್ದು ಪಡಿಸಿರುವುದಿಲ್ಲ.<br>ಆದರೆ ಕೇಂದ್ರ ಸರ್ಕಾರದ ನಿರ್ದೇಶನ ಹಾಗೂ ರಾಜ್ಯ ಸರ್ಕಾರದ ಮಾನದಂಡಗಳಂತೆ ಅನರ್ಹ ಪಡಿತರ ಚೀಟಿಗಳನ್ನು ಪತ್ತೆಹಚ್ಚಿ ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲಾಗುತ್ತಿದೆ. (ತಾಲ್ಲೂಕುವಾರು ವಿವರ ಅನುಬಂಧ-02 ರಲ್ಲಿ ಒದಗಿಸಲಾಗಿದೆ |
| ಇ | ಪಡಿತರ ಚೀಟಿ ರದ್ದುಪಡಿಸಿದ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇಲ್ಲದ ಕಾರಣದಿಂದ ಹಲವಾರು ತೊಂದರೆಗಳು ಸಂಭವಿಸುತ್ತಿವೆ. ಈ ನಿಯಮಾವಳಿಗಳನ್ನು ಪರಿಷ್ಕರಿಸಲು ಸರ್ಕಾರದ ಉದ್ದೇಶವೇನು; (ವಿವರ ನೀಡುವುದು) | ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರವು ನಿಗಧಿಪಡಿಸಿರುವ ಮಾನದಂಡಗಳ ವಿರುದ್ಧವಾಗಿ ಪಡೆದಿರುವ ಆದ್ಯತಾ ಪಡಿತರ ಚೀಟಿಗಳನ್ನು ಪತ್ತೆಹಚ್ಚಿ ಸದರಿ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗಿರುತ್ತದೆ.<br>ಆದಾಗ್ಯೂ ಈ ರೀತಿ ತಾತ್ಕಲಿಕವಾಗಿ ಆದ್ಯತೇತರ ಪಡಿತರ ಚೀಟಿಯನ್ನಾಗಿ (NPHH) ಪರಿವರ್ತಿಸಲಾದ ಪಡಿತರ ಚೀಟಿದಾರರು ಆದ್ಯತಾ ಚೀಟಿ ಹೊಂದಲು (PHH) ಅರ್ಹರಾಗಿದ್ದಲ್ಲಿ 45 ದಿನದೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಸಂಬಂಧ ಪಟ್ಟ ತಾಲ್ಲೂಕಿನ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದಲ್ಲಿ ಸದರಿ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಆದ್ಯತಾ ಪಡಿತರ ಚೀಟಿ ಹೊಂದಲು ಅರ್ಹರಿದ್ದಲ್ಲಿ ಅಂತಹವರ ಆದ್ಯತಾ ಪಡಿತರ ಚೀಟಿಯನ್ನು (PHH) ಮರುಸ್ಥಾಪಿಸಲು ಕ್ರಮವಹಿಸಲಾಗುತ್ತದೆ.<br>ಅದರಂತೆ ಒಂದು ವೇಳೆ ಅರ್ಹ ಫಲಾನುಭವಿಯ ಆದ್ಯತಾ ಪಡಿತರ ಚೀಟಿಯನ್ನು ರದ್ದುಪಡಿಸಿದಲ್ಲಿ, ಸಂಬಂಧಪಟ್ಟ ತಹಶೀಲ್ದಾರ್‌ಗೆ ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| ಈ | ಅನ್ನಭಾಗ್ಯ ಯೋಜನೆಯಡಿಯಲ್ಲಿ ಘೋಷಿತ ಪ್ರಮಾಣದ ಉಚಿತ ಅಕ್ಕಿ ಇಂದಿಗೂ ಹಲವಾರು ಫಲಾನುಭವಿಗಳಿಗೆ ಲಭ್ಯವಿಲ್ಲ. ಈ ವಿಳಂಬಕ್ಕೆ ಕಾರಣವೇನು; ಸರ್ಕಾರ ಇದರ ಮೇಲ್ವಿಚಾರಣೆಯಲ್ಲಿ ವಿಫಲವಾಗಿಲ್ಲವೆ; (ವಿವರ ನೀಡುವುದು) | ಅನ್ನಭಾಗ್ಯ ಯೋಜನೆಯಡಿ ಪ್ರತಿ ಅರ್ಹ ಫಲಾನುಭವಿಗೆ ಹೆಚ್ಚುವರಿಯಾಗಿ 5 ಕೆ.ಜಿ ಅಕ್ಕಿಯನ್ನು ನಿಯಮಿತವಾಗಿ ವಿತರಣೆ ಮಾಡಲಾಗುತ್ತಿರುವುದರಿಂದ ಈ ರೀತಿಯಾದ ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| ಉ | ಇತ್ತೀಚಿನ ದಿನಗಳಲ್ಲಿ ನಿರ್ಧಾರಗಳು ತೆಗೆದುಕೊಳ್ಳುತ್ತಿರುವಾಗ ಸ್ಥಳೀಯ ಶಾಸಕರು, ಶಾಸನ ಮಂಡಳಿಯ ಸದಸ್ಯರು ಅಥವಾ ಜಿಲ್ಲಾ ಪಂಚಾಯತ್ ಪ್ರತಿನಿಧಿಗಳನ್ನು ಪರಾಮರ್ಶಿಸದೇ ತೀರ್ಮಾನಿಸಲಾಗುತ್ತಿದೆ ಎಂಬ ಆರೋಪಗಳಿದ್ದು ಸರ್ಕಾರ ಇದರ ಬಗ್ಗೆ ಸ್ಪಷ್ಟನೆ ನೀಡುವುದೇ; (ವಿವರ ನೀಡುವುದು) | ಈ ರೀತಿ ಯಾವುದೇ ಆರೋಪ/ ದೂರುಗಳು ಸರ್ಕಾರದ ಹಂತದಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಊ | ತಾಂತ್ರಿಕ ದೋಷಗಳಿಂದ ಬಡ ಜನತೆ ಸಹಾಯದಿಂದ ವಂಚಿತರಾಗುತ್ತಿರುವ ಸಮಯದಲ್ಲಿ ಇಂತಹ ಘಟನೆಗಳನ್ನು ತಡೆಯಲು ಮತ್ತು ತಕ್ಷಣ ಪರಿಹರಿಸಲು ಸರ್ಕಾರ ಹೊಸ ಮೇಲ್ವಿಚಾರಣಾ ವ್ಯವಸ್ಥೆ ಅಥವಾ ಗ್ರೀವೆನ್ ರೆಡ್ರೆಸಲ್ ಮೆಕಾನಿಸಂ ರೂಪಿಸಿದವೇ? (ವಿವರ ನೀಡುವುದು) | ಉದ್ಭವಿಸುವುದಿಲ್ಲ. |

ಇ-ಆನಾಸ 335 ಡಿಆರ್ಎ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು

| ಅನುಬಂಧ-01 | | | | |
|---|---|---|---|---|
| ಶ್ರೀ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 936 | | | | |
| ಏಪ್ರಿಲ್ 2025 ರಿಂದ ನವೆಂಬರ್ 2025 ರ ವರೆಗೆ ರದ್ದುಪಡಿಸಲಾದ ಆದ್ಯತಾ ಪಡಿತರ ಚೀಟಿ ವಿವರ | | | | |
| Sl. | District Name | AAY Cancelled RC Count | PHH Cancelled RC Count | Total No. of Cancelled RCs |
| 1 | BAGALKOTE | 194 | 2804 | 2998 |
| 2 | BALLARI | 51 | 505 | 556 |
| 3 | BANGALORE EAST | 39 | 219 | 258 |
| 4 | BANGALORE NORTH | 8 | 688 | 696 |
| 5 | BANGALORE SOUTH | 17 | 280 | 297 |
| 6 | BANGALORE WEST | 86 | 757 | 843 |
| 7 | BELAGAVI | 207 | 6081 | 6288 |
| 8 | BENGALURU | 72 | 1794 | 1866 |
| 9 | BENGALURU RURAL | 2 | 504 | 506 |
| 10 | BIDAR | 118 | 1892 | 2010 |
| 11 | CHAMARAJANAGARA | 236 | 3624 | 3860 |
| 12 | CHIKKABALLAPURA | 66 | 1543 | 1609 |
| 13 | CHIKKAMAGALURU | 46 | 987 | 1033 |
| 14 | CHITRADURGA | 50 | 1349 | 1399 |
| 15 | DAKSHINA KANNADA | 19 | 398 | 417 |
| 16 | DAVANAGERE | 92 | 1135 | 1227 |
| 17 | DHARWAR | 134 | 902 | 1036 |
| 18 | GADAG | 44 | 1085 | 1129 |
| 19 | HASSAN | 53 | 1885 | 1938 |
| 20 | HAVERI | 59 | 1714 | 1773 |
| 21 | KALABURAGI | 117 | 2052 | 2169 |
| 22 | KODAGU | 69 | 305 | 374 |
| 23 | KOLAR | 85 | 1016 | 1101 |
| 24 | KOPPAL | 296 | 1917 | 2213 |
| 25 | MANDYA | 116 | 2370 | 2486 |
| 26 | MYSURU | 63 | 4219 | 4282 |
| 27 | RAICHUR | 89 | 1060 | 1149 |
| 28 | RAMANAGARA | 75 | 2186 | 2261 |
| 29 | SHIVAMOGGA | 40 | 1572 | 1612 |
| 30 | TUMAKURU | 109 | 2597 | 2706 |
| 31 | UDUPI | 46 | 292 | 338 |
| 32 | UTTARA KANNADA | 40 | 1060 | 1100 |
| 33 | VIJAYANAGARA | 100 | 1007 | 1107 |
| 34 | VIJAYAPURA | 130 | 1321 | 1451 |
| 35 | YADGIR | 13 | 223 | 236 |
| | **TOTAL** | **2981** | **53343** | **56324** |

Joint Director (IT)
Food, Civil Supplies
And Consumer Affairs
Department

ಅನುಬಂಧ-2

ಶ್ರೀ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 936

ಜನವರಿ 2025 ರಿಂದ ನವೆಂಬರ್ 2025 ರ ವರೆಗೆ ರದ್ದುಪಡಿಸಲಾದ ಆದ್ಯತಾ ಪಡಿತರ ಚೀಟಿಗಳ ತಾಲ್ಲೂಕುವಾರು ವಿವರ

| Sl. | District Name | Taluk Name | AAY Cancelled RCs Count | PHH Cancelled RCs Count | Total No. of Cancelled RCs Count |
|---|---|---|---|---|---|
| 1 | KOPPAL | GANGAVATI | 79 | 1403 | 1482 |
| 2 | KOPPAL | KOPPAL | 54 | 145 | 199 |
| 3 | KOPPAL | KUSHTAGI | 137 | 229 | 366 |
| 4 | KOPPAL | YELBURGA | 30 | 223 | 253 |
| | KOPPAL Total | | 300 | 2000 | 2300 |

Joint Director (IT)
Food, Civil Supplies
And Consumer Affairs
Department